ಸಮಿತಿ ಏನು ಮಾಡುತ್ತಾರೆ? ಮಾಡುವುದಿಲ್ಲ ಎಂದು ಒಂದು ಸಾರಿ ಹೇಳಿ ಬಿಡಿ.

ಅಧ್ಯಕ್ಷರು: ನಾಳೆ ಕರೆಯೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾಳೆ ಸದನ ಸೇರುವುದಕ್ಕೆ ಮುಂಚೆ ಕರೆಯಬೇಕು.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ(ಕಲಘಟಗಿ)

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು)

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಧಾರವಾಡ ಜಿಲ್ಲೆಯಲ್ಲಿರುವ ಕಲ್ಲು ಗಣಿ ಕ್ವಾರಿಗಳು ಎಷ್ಟು (ತಾಲ್ಲೂಕು ವಾರು ಮತ್ತು ಅವುಗಳ ಮಾಲೀಕರ ವಾರು ವಿವರಗಳನ್ನು ನೀಡುವುದು).</td><td>ಧಾರವಾಡ ಜಿಲ್ಲೆಯಲ್ಲಿ ಯಾವುದೇ ಅಲಂಕಾರಿಕ ಗ್ರಾನೈಟ್ ಗಣಿಗಾರಿಕೆಗೆ ಗುತ್ತಿಗೆ ನೀಡಿರುವುದಿಲ್ಲ. ಕೇವಲ ಕಟ್ಟಡ ಕಲ್ಲು ಗಣಿಗಾರಿಕೆಗೆ ಮಾತ್ರ 155 ಕಲ್ಲುಗಣಿ ಗುತ್ತಿಗೆ ನೀಡಿದೆ. ತಾಲ್ಲೂಕು ವಾರು ಮತ್ತು ಗುತ್ತಿಗೆದಾರರ ವಿವರ ವನ್ನು ಅನುಬಂಧದಲ್ಲಿ ನೀಡಿದೆ.</td></tr>
<tr><td>ಆ.</td><td>ಸರ್ಕಾರದಿಂದ ಗುತ್ತಿಗೆಯನ್ನು (ಲೀಸ್) ಪಡೆದ ಕ್ವಾರಿಗಳ ಸಂಖ್ಯೆ ಎಷ್ಟು ಅವು ಯಾವುವು:</td><td>ಉ. ತಾಲ್ಲೂಕುವಾರು ಮಂಜೂರಾದ ಗುತ್ತಿಗೆಗಳ ವಿವರ ಕೆಳಗಿನಂತಿದೆ.
<table>
<tr><td>1. ಧಾರವಾಡ</td><td>:</td><td>30</td></tr>
<tr><td>2. ಕಲಘಟಗಿ</td><td>:</td><td>81</td></tr>
<tr><td>3. ಹುಬ್ಬಳ್ಳಿ</td><td>:</td><td>41</td></tr>
<tr><td>4. ನವಲಗುಂದ</td><td>:</td><td>02</td></tr>
<tr><td>5. ಕುಂದಗೋಳ</td><td>:</td><td>01</td></tr>
<tr><td>ಒಟ್ಟು</td><td>:</td><td>155</td></tr>
</table></td></tr>
</table>

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಇ.	ಇದರಿಂದ ಸರ್ಕಾರಕ್ಕೆ ಸಂದಾಯ ವಾಗುವ ರಾಯಲ್ಟಿ(ರಾಜಧನ) ಎಷ್ಟು	2004–05ನೇ ಸಾಲಿನಲ್ಲಿ 7.80ಲಕ್ಷ ರೂ. ರಾಜಧನ ಸಂಗ್ರಹವಾಗಿರುತ್ತದೆ.
ಈ.	ಪರವಾನಗಿಯನ್ನು ಪಡೆಯದೆ ಕ್ವಾರಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಹೌದು.
ಉ.	ಬಂದಿದ್ದಲ್ಲಿ ಅಂತಹವುಗಳ ಸಂಖ್ಯೆ ಎಷ್ಟು ಹಾಗೂ ಇವುಗಳ ಬಗ್ಗೆ ಸರ್ಕಾರದ ಕ್ರಮಗಳೇನು?	8 ಅಕ್ರಮ ಪ್ರಕರಣಗಳು ಕಂಡು ಬಂದಿದ್ದು ಅಕ್ರಮ ಗಣಿಗಾರಿಕೆ ವಿರುದ್ಧ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ಪ್ರಕಾರ ಕ್ರಮ ಕೈಗೊಂಡು ರೂ.20,000.00 ದಂಡ ವಿಧಿಸಲಾಗಿದೆ. ಹಾಗೂ ಕಲ್ಲುಗಣಿ ಗುತ್ತಿಗೆ ಪಡೆದುಕೊಳ್ಳಲು ಅವರಿಗೆ ಅರ್ಜಿ ಸಲ್ಲಿಸಲು ಪ್ರೇರೇಪಿಸಲಾಗಿದೆ ಹಾಗೂ ಗುತ್ತಿಗೆ ಮಂಜೂರಾತಿಗಾಗಿ ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಜಿಲ್ಲೆ: ಧಾರವಾಡ

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	ಧಾರವಾಡ ತಾಲ್ಲೂಕು	3	4	5	6
1	ವಿಜಯ ಎಂ.ಕುಲಕರ್ಣಿ	245	15.04.99	1.00	ಮಂಡಿಹಾಳ್
2	ಎಂ.ಆರ್.ತಾಳೂರ್	246	15.04.99	1.00	ಮಂಡಿಹಾಳ್
3	ಕೆ.ರಾಜೇಶ್ ಅನಂತಯ್ಯ	247	15.04.99	1.00	ಮುಗದ
4	ಎಸ್.ಎಲ್ ಅಂಗಡಿ	248	05.06.99	1.00	ಮಂಡಿಹಾಳ್

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
5	ದುರ್ಗಮ್ಮ ಎನ್.ಕಟ್ಟಿಮನಿ	252	28.06.99	1.00	ಚಂದನಮಟ್ಟಿ
6	ಚನ್ನಬಸಪ್ಪ ಜಿ.ಸಾಣಿಕೊಪ್ಪ	283	12.06.00	1.00	ಮಂಡಿಹಾಳ್
7	ಮಹಂತೇಶ್.ವಿ.ಕಾಲವಾಡ	301	18.12.00	0.20	ಮಂಡಿಹಾಳ್
8	ಎಫ್.ಸಿ.ಪಾಟೀಲ್	325	07.05.01	1.00	ಮಲಿನಾಗಲಾವಿ
9	ಕಾಶಪ್ಪ ಎನ್.ಹಿರೇಮನಿ	339	30.06.01	0.20	ಮಂಡಿಹಾಳ್
10	ಅನೀಲ್ ಎಸ್.ಅಂಗಡಿ	342	04.07.01	1.00	ಮಂಡಿಹಾಳ್
11	ಪಿ.ವಿ.ಕಣಬೂರ	346	28.06.01	0.20	ಮಂಡಿಹಾಳ್
12	ಬಿ.ಆರ್.ಅಂಬಡಗಟ್ಟಿ	347	30.07.01	1.00	ಕಡಬಗಟ್ಟಿ
13	ಕಲ್ಲಪ್ಪ ಎಫ್.ಹಟ್ಟಿ	348	31.07.01	1.00	ಮಂಡಿಹಾಳ್
14	ಎಂ.ಎಸ್.ಲಿಂಗಾರೆಡ್ಡಿ	353	16.08.01	2.00	ಮಂಡಿಹಾಳ್
15	ಎಂ.ಎಂ.ಪಾಟೀಲ್	354	16.08.01	1.00	ಮಂಡಿಹಾಳ್
16	ವೈ.ಆರ್.ರಾಮನಗೌಡರ	355	17.08.01	0.20	ಮಂಡಿಹಾಳ್
17	ಮೀನಾಕ್ಷಿ ಆರ್.ಲಕ್ಷಣ್ಣನವರ್	358	23.08.01	1.00	ಮುಗದ
18	ಕಾಶೀನಾಥ್ ಬಿ.ಸಾಣಿಕೊಪ್ಪ	398	23.04.02	1.00	ಮಂಡಿಹಾಳ್
19	ಜಯಕುಮಾರ್.ಡಿ.ಪತ್ರಾವಳಿ	400	23.04.02	1.00	ಮಂಡಿಹಾಳ್
20	ಎಸ್.ಎಂ.ಮಂಜಾವರ್	407	10.05.02	1.00	ಮಲಿನಾಗಲಾವಿ
21	ಬಾಲಪ್ಪ ಆರ್.ಜಾಧವ್	425	14.06.02	1.00	ಮದನಬಾವಿ
22	ಸರೋಜ.ಐ.ಕುಲಕರ್ಣಿ	432	27.03.02	1.00	ಮಂಡಿಹಾಳ್
23	ರಾಜೇಶ್ವರಿ ಎಂ.ಎಂ.ದೇಸಾಯಿ	450	11.11.02	0.20	ಕೋಟೂರು
24	ಚಂದ್ರಶೇಕಂ.ಎಂ.ಕಣವಿ	452	15.11.02	0.20	ಮುರಕಟ್ಟಿ

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
25	ಬಿ.ಆರ್.ದೇಸಾಯಿ	463	15.12.03	0.20	ಕೋಟೂರು
26	ಎಲ್.ರಾಜರೆಡ್ಡಿ	470	20.05.03	0.20	ಮಂಡಿಹಾಳ
27	ಬಿ.ಎಂ.ಅನಾಡ	488	11.05.02	0.30	ಅಮ್ಮಿರಬಾವಿ
28	ಮೆ:ಸಾಯಿ ಎಂಟರ್ ಪ್ರೈಸಸ್	495	12.9.03	1.00	ರಾಮಾಪುರ
29	ಶ್ರೀಮತಿ ದುರಗವ್ವ ಎಸ್. ಕಟ್ಟಿಮನಿ ಸಾ:ಚಂದನಮಟ್ಟಿ ತಾ:ಧಾರವಾಡ	566	9.12.04	0.20	ಚಂದನಮಟ್ಟಿ
30	ಶ್ರೀಶೈಲ ಸಿ.ಸಾಣಿಕೊಪ್ಪ ಕೆಲಗೇರಿ ರಸ್ತೆ, ಧಾರವಾಡ	568	4.01.05	1.00	ಮಂಡಿಹಾಳ್
ತಾಲ್ಲೂಕು ಕಲಘಟಗಿ					
1	ವೈ.ಬಿ.ಕಟಂಪ್ಪ ಗೌಡರ್	553	03.06.97	1.20	ಎಮ್ಮೆಟ್ಟಿ
2	ಮೆ11 ಬಸವೇಶ್ವರ ಸ್ಟೋನ್ ಕ್ರಷರ್ಸ್	214	14.01.99	1.00	ಹಿರೆಹೊನ್ನಹಳ್ಳಿ
3	ಸಿ.ಬಿ.ಯಮಕನಮರ್ಡಿ	231	12.03.99	1.00	ಎಮ್ಮೆಟ್ಟಿ
4	ಭೀಮಣ್ಣ ಎನ್.ಅರ್ಕಸಾಲಿ	251	19.06.99	1.00	ಎಮ್ಮೆಟ್ಟಿ
5	ಸಿ.ಡಿ.ಪಟೇಲ್	262	16.10.99	1.00	ಲಿಂಗದಕೊಪ್ಪ
6	ಭೀಮಣ್ಣ ಉ.ದಾರಕೋಜಿ ದಿ:12-11-02ರಿಂದ ಇಲಾಖೆ ಗಣಿಗಾರಿಕೆ ಸ್ಥಗಿತಗೊಳಿಸಿದೆ	263	21.10.99	0.20	ದಾಸನೂರು

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ .
1	2	3	4	5	6
7	ಸಿದ್ದಪ್ಪ, ಬಾರಕೋಟೆ ದಿ:12.11.02ರಿಂದ ಇಲಾಖೆ ಗಣಿಗಾರಿಕೆ ಸ್ಥಗಿತಗೊಳಿಸಿದೆ.	264	27.10.99	0.20	ದಾಸನೂರು
8	ಎಂ.ಜಿ.ದೊಡ್ಡವಾಡ	265	19.11.99	1.00	ಎಮ್ಮೆಟ್ಟಿ
9.	ಸಿದ್ದಪ್ಪ ಎಂ.ಕರತಂಗಿ	274	13.3.2000	1.00	ಬೆಂಡಾಲಗಟ್ಟಿ
10	ಶಂಕರ್ ಮಾರುತಿ ಕುಲಿಂಗೋಡ	285	1.7.2000	1.00	ಎಮ್ಮೆಟ್ಟಿ
11	ಕಲ್ಲಿನಾಥ್‌ಸಂಗಪ್ಪ ಮುಗಳಿ	286	7.9.2000	1.00	ಮುತ್ತಗಿ
12	ಎಸ್.ಆರ್.ಕುಲಕರ್ಣಿ	289	13.7.2000	2.00	ಮುತ್ತಗಿ
13	ಬಸವರಾಜ್ ಸಿ.ಬಾಬಜಿ	290	28.7.2000	1.00	ದೂಲಿಕೊಪ್ಪ
14	ಹರಿಶ್ಚಂದ್ರಶೋಬನಾಸಿಂಗ್	294	10.8.2000	1.00	ಲಿಂಗದಕೊಪ್ಪ
15	ಯಲ್ಲಪ್ಪ ಚಿನ್ನಪ್ಪ ಅಲ್ಲಾಪುರ	299	20.11.2000	1.00	ಉಗ್ಗಿನಕೇರಿ
16	ಈರಪ್ಪ ಡಿ.ಗೋಕುಲ	300	20.11.2000	1.00	ಉಗ್ಗಿನಕೇರಿ
17	ಮಹಾಲಿಂಗ ಸಿ,ಯಲಿವಾಳ	308	27.1.2000	0.20	ಹಿರೆಹೊನ್ನಹಳ್ಳಿ
18	ಎ.ಎ.ಗಂಗೊಳ್ಳಿ	310	7.2.2001	0.20	ಹಿರೆಹೊನ್ನಹಳ್ಳಿ
19	ಶ್ರೀಮತಿ ಐ.ಸಿ.ಹಿರೇಮಠ	312	19.9.2000	0.20	ಹಿರೆಹೊನ್ನಹಳ್ಳಿ
20	ಶ್ರೀಮತಿ ಐ.ಸಿ.ಹಿರೇಮಠ	321	19.4.2000	0.20	ಹಿರೆಹೊನ್ನಹಳ್ಳಿ
21	ಮೆ:ಹೆಬ್ಬಾಳ ಬ್ರದರ್ಸ್	327	02.06.01	1.00	ಕಾಡನಕೊಪ್ಪ
22	ಮಲ್ಲಪ್ಪ ಬಿ.ತಿಗಿಗಟ್ಟಿ	467	07.02.03	0.20	ಗಣಿಗಟ್ಟಿ
23	ಮಲ್ಲಪ್ಪ ಲಕ್ಷ್ಮಣ ವಡ್ಡರ	470	11.03.03	0.20	ಧಮ್ಮವಾಡ
24	ಶಂಕರ ಎಂ.ಕುಲಗೋಡೆ	476	31.03.03	1.00	ಎಮ್ಮೆಟ್ಟಿ

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ಪ್ರೀರ್ಣ ಎಕರೆ	ಪ್ರದೇಶ
1	2	3	4	5	6
25	ಶಿವಾನಂದ ಎಸ್. ಗಾಮನಗಟ್ಟಿ	477	31.03.03	2.00	ಎಮ್ಮೆಟ್ಟಿ
26	ಶಿವಾನಂದ ಎಸ್ ಗಾಮನಗಟ್ಟಿ	478	01.04.03	2.00	ಎಮ್ಮೆಟ್ಟಿ
27	ಎಸ್.ಆರ್.ರಾಮನಗೌಡರ	487	21.06.03	1.00	ಲಿಂಗನಕೊಪ್ಪ
28	ಗುರುರಾಜ ಎನ್.ರತ್ನಕಟ್ಟಿ	491	19.8.03	0.20	ಹಿರೆಹೊನ್ನಹಳ್ಳಿ
29	ವಿಜಯಾನಂದ ಸಿ. ಕಿತ್ತೂರು	494	05.09.03	1.00	ಎಮ್ಮೆಟ್ಟಿ
30	ಎಂ.ಎನ್.ಅಂಗಡಿ	497	30.09.05	1.00	ಚಳಮಟ್ಟಿ
31	ಎಸ್.ಆರ್.ಜಾಧವ್	499	14.10.03	0.20	ಲಿಂಗನಕೊಪ್ಪ
32	ಗಣಪತಿ ಆರ್.ವರಗುಂದ	501	14.10.03	0.20	ಹರವಿನಕೊಪ್ಪ
33	ನಿರ್ಮಲಾ ಜಿ.ಗೋಪಿನಾಥ್	502	03.10.02	0.20	ಮುತ್ತಗಿ
34	ವಿ.ವಿ.ಕುಂಬಾರ್	506	25.11.03	0.20	ಬಿರುವಳ್ಳಿ
35	ಪಿ.ಸಿ.ಕನಕಣ್ಣನವರ	500	2.12.03	1.00	ಕಾಡನಕೊಪ್ಪ
36	ಬಿ.ಎಸ್.ಅರ್ಕಸಾಲಿ	512	14.02.03	2.00	ಎಮ್ಮೆಟ್ಟಿ
37	ಉಬೇಶ್ವರ ಸ್ವಾಮಿ	513	6.01.04	1.00	ಲಿಂಗರಕೊಪ್ಪ
38	ರಝಿಯಾ ಬೇಗಂ ಶಿಂಗೋಟ	516	8.01.04	0.20	ಮಿಶ್ರಕೋಟ
39	ಪ್ರೇಮ ವಿ.ಪಾಟೀಲ್	517	01.01.04	0.20	ಮುತ್ತಗಿ
40	ಮಹಾಬಲೇಶ್ವರ ರಾಮರಾಯ ಪಾಟೀಲ್	527	15.03.04	1.00	ದಾಸನೂರು
41	ರಾಮರಾಟೆ ಈರಪ್ಪ ಪಾಟೀಲ್	528	15.03.04	2.00	ದಾಸನೂರು
42	ಮೆ:ಬಸವೇಶ್ವರಸ್ಟೋ.ಕ್ರಂ.ಇಂ.	329	01.06.01	1.00	ದ್ಯಾವರಕೊಪ್ಪ
43	ಅರವಿಂದ ಎನ್.ಕ್ಷೀರಸಾಗರ	337	27.06.01	0.35	ಗಂಜಿಗಟ್ಟಿ

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
44	ಸುಜಾತ್.ಎಂ.ಹಿರೇಮಠ್	350	1.08.01	1.00	ಕಾಡಸಕೊಪ್ಪ
45	ಅಶೋಕ್.ಟಿ.ಪವಾರ್	352	30.07.01	0.16	ಉಗ್ಗಿನಕೇರಿ
46	ಶ್ರೀಮತಿ ಗೀತಾ ಲೋಕೇಶ್	362	12.01.01	0.20	ಲಿಂಗನಕೊಪ್ಪ
47	ವೈ.ಹೆಚ್.ಕೆಂಚಕ್ಕನವರ್	365	09.10.01	1.20	ಎಮ್ಮೆಟ್ಟಿ
48	ಆರ್.ಎಂ.ಕೆಂಚಕ್ಕನವರ್	366	09.10.01	1.20	ಎಮ್ಮೆಟ್ಟಿ
49	ಬಸವಣ್ಣೆಪ್ಪ ಜಿ.ಉಳ್ಳಾಗಡ್ಡಿ	368	19.10.01	0.20	ಉಗ್ಗಿನಕೇರಿ
50	ಬಸವಣ್ಣೆಪ್ಪ ಟಿ.ಗೋಕುಲ್	369	29.10.01	0.20	ಉಗ್ಗಿನಕೇರಿ
51	ಅಶೋಕ್ ಎಸ್.ಬೆಟಗೇರಿ	370	05.11.01	1.00	ಎಮ್ಮೆಟ್ಟಿ
52	ಚಂದ್ರಶೇಖರ್.ಎಂ.ದಾಡಿಬಾವಿ	372	07.11.01	1.00	ಲಿಂಗನಕೊಪ್ಪ
53	ಎಂ.ಎಂ.ಬೆಳಗಲಿ	376	22.11.01	1.00	ಧೂಳೀಕೊಪ್ಪ
54	ಹೆಚ್.ಎಫ್.ಮುದ್ದುಕಣ್ಣವನರ್	378	27.11.01	1.00	ಮುತ್ತಗಿ
55	ಅಶೋಕ್ ಎಂ.ಗೋಕುಲ್	379	06.12.01	0.20	ಉಗ್ಗಿನಕೇರಿ
56	ಹೆಚ್.ಬಿ.ಪಾಟೀಲ್	380	26.10.01	0.19	ಉಗ್ಗಿನಕೇರಿ
57	ಆರ್.ಆರ್.ಕಟ್ಟಿಮನಿ	384	14.12.01	0.20	ಕಾಡನಕೊಪ್ಪ
58	ಪ್ರಕಾಶ್ ಮಹಾಬಲಶೆಟ್ಟಿ	387	11.01.02	0.20	ಕಾಡನಕೊಪ್ಪ
59	ಗುರುಪ್ರಕಾಶ್ ವಿ.ಕೊಚಲಾಪುರಮಠ	392	08.03.02	1.00	ಹಿರೇಹೊನ್ನಳ್ಳಿ
60	ಕೃಷ್ಣ ಹೆಚ್.ಮಲ್ಲೂರ್	394	14.03.02	0.20	ಕುರುವಿನಕೊಪ್ಪ
61	ಎನ್.ಎಂ.ಮಾಳಗಿ	405	7.05.02	0.20	ಕಾಡನಕೊಪ್ಪ
62	ವೈ.ಯು.ದಾರಕೋಜಿ	410	22.05.02	0.20	ದಾಸನೂರು

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
63	ಎಸ್.ಎಸ್.ಬಾಗಲಕೋಟೆ	411	22.05.02	0.20	ದಾಸನೂರು
64	ಬಿ.ಕೆ.ಅನಂಪೂರ್	434	08.05.01	2.00	ಉಗ್ಗಿನಕೇರಿ
65	ಶಿವಾಜಿ.ಕೆ.ಸುಳ್ಯದ	435	25.09.02	1.00	ದಾಸನೂರು
66	ತಾನಾಜಿ.ಕೆ.ಸುಳ್ಯದ	447	17.10.02	1.00	ದಾಸನೂರು
67	ಎಸ್.ಎಸ್.ರಾಜೂರ್	448	24.10.02	0.20	ಉಗ್ಗಿನಕೇರಿ
68	ಶಂಕರ್.ಕೆ.ಸುಳ್ಯದ	449	25.10.02	1.00	ದಾಸನೂರು
69	ಅಜಿತ್.ಎಂ.ಕರಡಣ್ಣನವರ್	458	31.12.02	0.30	ಮಿಶ್ರಕೋಟೆ
70	ಮೆಃಭಮಾನಿ ಸ್ಟೋನ್‌ಕ್ರಷರ್‌ಇಂಡಿಯಾ	461	03.01.03	0.20	ಸುರಸೆಟ್ಟಸೊಪ್ಪ
71	ಸುರೇಶ ಜಿ.ದಾರಕೋಜಹಿ ಜೋಡಳ್ಳಿ.ಕಲಘಟಗಿ ತಾ:	534	22.05.04 5 ವರ್ಷ	0.20	ದಾಸನೂರು
72	ಶಿವಾನಂದ.ವೈದರಾಜಕೋಜ ದಾಸನೂರು, ಕಲಘಟಗಿ	535	22.05.04 5 ವರ್ಷ	0.20	ದಾಸನೂರು
73	ಎಂಎಸ್.ಕಳಸನಕೊಪ್ಪ ದೇವಲಿಂಗನಕೊಪ್ಪ ಕಲಘಟಗಿ	536	22.05.04 5 ವರ್ಷ	0.20	ದಾಸನೂರು
74	ಶಿವಪ್ಪ ಕಲ್ಲಪ್ಪ ಊಣಕಲ್ ಜೊಡಹಳ್ಳಿ, ಕಲಘಟಗಿ	538	26.05.04	0.20	ದಾಸನೂರು
75	ಎಸ್.ಹೆಚ್.ಬಾಗಲಕೋಟೆ, ಕಣವಿಹೊನ್ನಾಪುರ, ಧಾರವಾಡ	539	01.06.04	0.20	ದಾಸನೂರು
76	ಜಂಬಣ್ಣ.ಎಂ.ದಾರಕೋಜಿ, ಕಳಸಬಕೊಪ್ಪ, ಕಲಘಟಗಿ ತಾ:	540	04.06.04	0.20	ದಾಸನೂರು

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
77	ಮಂಜುನಾಥ ಚನ್ನಪ್ಪ ಕೋಟೆ ದಾಸನೂರ, ಕಲಘಟಗಿ	541	05.06.04	0.20	ದುಮ್ಮವಾಡ
78	ವೈ.ಬಿ.ಕಂಟೆಪ್ಪಗೌಡರ್ ಎಮ್ಮೆಟ್ಟಿ ಕಲಘಟಗಿ ತಾ:	553	03.08.04	1.20	ಎಮ್ಮೆಟ್ಟಿ
79	ಬಿ.ಎಸ್.ಗಾವಕರ್, ಪಿ.ಬಿ.ರಸ್ತೆ, ಸಿದ್ಧಾರ್ಥಕಾಲೋನಿ,ಧಾರವಾಡ.	555	07.08.04	1.00	ಹಿರೆಹೊನ್ನಳ್ಳಿ
80	ಜಿ.ಆರ್.ರಾಯಾಜಿ, ಹೊಸೂರ ಹುಬ್ಬಳ್ಳಿ.	556	18.08.04	3.00	ಹಿರೆಹೊನ್ನಳ್ಳಿ
81	ಬಸವರಾಜ ಜಿ.ಮಡಿವಾಳರ್ ತಡಸ, ತಾ:ಶಿಗ್ಗಾಂವ	570	20.01.05	2.00	ತಬಕದ ಹನ್ನಿಹಳ್ಳಿ
ಹುಬ್ಬಳ್ಳಿ ತಾಲ್ಲೂಕು					
1	ಕೇಶವ ಎಂ.ಯಾದವ್	187	05.07.99	2.00	ಛಬ್ಬಿ
2.	ಶೋಭಾ ಕೆ.ಶೆಟ್ಟಿ	250	18.06.99	0.30	ಶೇರವಾಡ
3	ಜೆ.ಸಿ.ಪಾಟೀಲ	254	26.07.99	2.00	ಆದರಗುಂಟಿ
4	ವಿ.ಎನ್.ಕಂಪ್ಲಿ	258	20.09.99	1.00	ಆದರಗುಂಟಿ
5	ಮಂಜುನಾಥ್ ಎಚ್.ದೊಡ್ಡಮನಿ	268	12.04.00	1.00	ಛಬ್ಬಿ
6	ಮೆ: ಲಕ್ಷ್ಮಿ ಸ್ಟೋ.ಕ್ರ.ಇಂ.	280	30.05.00	2.00	ಆದರಗುಂಟಿ
7	ಸಂಜೀವ್ ಎಸ್.ಸಾಣಿಕೊಪ್ಪ	287	09.01.00	1.00	ಛಬ್ಬಿ
8	ಎಸ್.ಎಸ್.ವೀರಗೌಡ	293	7.08.00	1.00	ಮಾಲ್ವಿ
9.	ಸಿ.ಬಿ.ಮೊರಬದ	302	18.12.00	0.20	ಚಪರೆಬಿಡ್ಡ

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
10	ನಿತಿನ್ ಎಂ.ಕೊಡದವಾಡ	303	23.12.00	0.20	ಅಮರಾಂಜಿ
11	ಹನುಮಂತಪ್ಪ ವೈ.ಸೋಮನಕೊಪ್ಪ	314	01.03.01	1.00	ಚವರಗುಡ್ಡ
12	ಡಿ.ಎಂ.ಪರಣ್ಣವರವ್	334	25.06.01	0.20	ಮಾಲ್ವಿ
13	ಆರ್.ಐ.ಚಿಕ್ಕನಗೌಡರ್	338	4.01.01	1.20	ಅದರಗುಂಜಿ
14	ವೈ.ಬಿ.ಸದ್ರಾಸೆ	391	04.03.02	1.00	ರೇವಡಿಹಾಳ್
15	ಸಿ.ಕೆ.ದ್ಯಾವರಗೌಡರ್	393	13.03.02	0.12	ಅದರಗುಂಜಿ
16	ಯಶವಂತ ಲಕ್ಷಣ ಸಾಬಳಿ	305	16.03.02	4.20	ಪಾಳ್ಯೆ
17	ಶಂಕರ್ ಎಸ್.ಪಾಟೀಲ್	401	24.03.02	1.00	ಮೂಲ್ವಿ
18	ಬಿ.ವಿ.ಹಿರೇಮಠ	406	08.05.02	0.20	ಅದರಗುಂಜಿ
19	ವೆಂಕಟಸಿಂಗ್ ಎಸ್.ರಜಮತ್	426	15.06.02	0.20	ಅದರಗುಂಜಿ
20	ಶಕುಂತಲ ಬಿ.ಹುನಗುಂದ್	427	02.11.01	1.00	ಚವರಗುಡ್ಡ
21	ರುದ್ರಗೌಡ ಎಸ್.ಪಾಟೀಲ್	428	01.07.02	0.30	ಪಾಳೆ
22	ಎನ್.ಜಿ.ಯಡವಣ್ಣನವರ್	428	01.07.02	3.00	
23	ಮೇ:ಸಾಯಿ ಸ್ಟೋನ್ ಕ್ರ.ಇಂ.	429	23.07.02	1.00	ಬಿ.ಅರಳೆಕಟ್ಟಿ
24	ಎಸ್.ಎಸ್.ವೀರನಗೌಡರ್	431	04.08.02	0.20	ಅದರಗುಂಜಿ
25	ವಿ.ಎಸ್.ವಿ.ಪ್ರಸಾದ್	451	23.12.02	1.00	ಪಾಳೆ
26	ಎಚ್.ಎಂ.ಸದಾನಂದ	468	07.02.03	0.20	ಶೇರ್ವಾಡ
27	ಯಲ್ಲಪ್ಪಗೌಡ ವಿ.ಪಾಟೀಲ್	473	29.03.03	1.00	ಅದರಗುಂಜಿ
28	ಮೆ:ವಿಜಯಶ್ರೀ ಸ್ಟೋ.ಕ್ರ.ಇ.	475	31.03.03	1.00	ಅದರಗುಂಜಿ

ಕ್ರ ಸಂ.	ಗುತ್ತಿಗೆದಾರರ ಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
29	ಆರ್.ಐ.ಚಿಕ್ಕನಗೌಡರ್	484	26.05.03	1.00	ಬಿ.ಅರಳೇಕಟ್ಟೆ
30	ಆರ್.ಐ.ಚಿಕ್ಕನಗೌಡರ್	485	26.05.03	1.00	ಮುಂಕರಹಳ್ಳಿ
31	ಪರಮೇಶ್ವರಪ್ಪ ಜೆ.ಶಿರಕೋಳ	489	19.07.03	1.00	ಶೇರ್ವಾಡ್
32	ಎಸ್.ಸಿ.ಪಾಟೀಲ್	510	17.12.03	1.00	ಛಬ್ಬ
33	ಕೆ.ಎಂ.ಯಾದವ್,ವಿದ್ಯಾನಗರ ಹುಬ್ಬಳ್ಳಿ	532	11.05.04 5 ವರ್ಷ	2.00	ಛಬ್ಬ
34	ಬಿ.ಸಿ.ಪಾಟೀಲ್ ಅದರಗುಂಜಿ	537	22.05.04 10 ವರ್ಷ	1.00	ಛಬ್ಬ
35	ಎಸ್.ಎಸ್.ವೀರನಗೌಡರ್ ಕೋಟಗುಣಸಿ, ಹುಬ್ಬಳ್ಳಿ ತಾ:	547	17.07.04 5 ವರ್ಷ	0.20	ಅದರಗುಂಜಿ
36	ಕೆ.ಸಂಜೀವಶೆಟ್ಟಿ ಆದರ್ಶನಗರ ಹುಬ್ಬಳ್ಳಿ ತಾ:	558	24.08.04	0.20	ಅಚಟಗೇರಿ
37	ಶಂಕರಪ್ಪ ಕಲ್ಲಪ್ಪ ಹುಲ್ತಿಕೋಟೆ ಅದರಗುಂಜಿ, ಹುಬ್ಬಳ್ಳಿ ತಾ:	562	21.10.04	0.20	ನೂಲ್ವಿ
38	ಶೋಭಾ ಕೆ.ಶೆಟ್ಟಿ, ಗೋಕುಲ ರಸ್ತೆ ಹುಬ್ಬಳ್ಳಿ	567	29.12.04	0.30	ಶೇರ್‌ವಾಡ
39	ಕೆ.ಸಂಜೀವ ಶೆಟ್ಟಿ, ಆದರ್ಶನಗರ ಹುಬ್ಬಳ್ಳಿ	569	18.01.05	0.20	ಚವರಗುಡ್ಡ
40	ಸಂತೋಷ ಲಕ್ಷಣ ಹಿರೇಕೆರೂರ, ಹೊಸೂರು, ಹುಬ್ಬಳ್ಳಿ	572	05.03.05	5.00	ಗೋಕುಲ
41	ಯಲ್ಲವ್ವ, ಎಲ್.ಹಿರೇಕೆರೂರು, ಸಾ:ಹೊಸೂರು. ಹುಬ್ಬಳ್ಳಿ	573	05.03.05	3.20	ಗೋಕುಲ

ಕ್ರ ಸಂ.	ಗುತ್ತಿಗೆದಾರರಹೆಸರು	ಕಗಗು ಸಂಖ್ಯೆ	ಮಂಜೂರಾತಿ ದಿನಾಂಕ ಅವಧಿ ವರ್ಷ	ವಿಸ್ತೀರ್ಣ ಎಕರೆ	ಪ್ರದೇಶ
1	2	3	4	5	6
ತಾಲ್ಲೂಕು:ನವಲಗುಂದ					
1	ಸುರೇಶ್ ಪಿ.ಗಾಯಕವಾಡ್	278	15.08.00	1.00	ಮಜ್ಜಿಗುಡ್ಡ
2	ದೇವಿರಮ್ಮ ಎಂ.ಶೆಟ್ಟಿ	390	21.10.00	2.00	ನವಲಗುಂದ
ತಾಲ್ಲೂಕು:ಕುಂದಗೋಳ					
1	ವೀರಭದ್ರಪ್ಪ ಮಹದೇವಪ್ಪ ಕೂಡ್ಲಿ, ಸಾ:ಹಿರೆಗುಂಜಾಳ ಕುಂದಗೋಳ ತಾ:	542	28.06.04	0.20	ಹಿರೇಗುಂಜಾಳ

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತಗಳು

ಅಧ್ಯಕ್ಷರು: ಈಶ್ವರಗೌಡರು...

ಪ್ರಶ್ನೆ ಸಂಖ್ಯೆ: 271(3511)

(ಉತ್ತರವನ್ನು ಲಗತ್ತಿಸಲಾಗಿದೆ)

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೆ, ಧಾರವಾಡ ಜಿಲ್ಲೆಯಲ್ಲಿ ಕಲ್ಲು ಗಣಿಕ್ವಾರಿ ಬಗ್ಗೆ ನಾನು ಕೇಳಿದ್ದೆನೆ. ಅದಕ್ಕೆ 155 ಗುತ್ತಿಗೆದಾರರು ಎಂದು ಉತ್ತರ ಕೊಟ್ಟಿದ್ದಾರೆ. ಎರಡನೇ ಪ್ರಶ್ನೆ ಸರ್ಕಾರದಿಂದ ಗುತ್ತಿಗೆ ಪಡೆದ ಕ್ವಾರಿಗಳ ಸಂಖ್ಯೆ ಎಷ್ಟು ಎಂದು ನಾನು ಕೊಟ್ಟಿದ್ದೇನೆ. 155 ಎಂದು ಅವರು ಹೇಳಿದ್ದಾರೆ. ಇದರಿಂದ ಸರ್ಕಾರಕ್ಕೆ ಸಂದಾಯವಾಗುತ್ತಿರುವಂತಹ ರಾಜಧನ ಎಷ್ಟು ಎಂದು ನಾನು ಕೇಳಿದ್ದೇನೆ. ಅದಕ್ಕೆ ಏಳು ಲಕ್ಷ 80,000 ಎಂದು ಉತ್ತರ ಕೊಟ್ಟಿದ್ದಾರೆ. ಪರವಾನಗಿ ಪಡೆಯದೆ ಇದ್ದಂತಹ ಕ್ವಾರಿಗಳ ಸಂಖ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇನೆ. ಹೌದು ಎಂದು ಹೇಳಿದ್ದಾರೆ. ಬಂದಿದ್ದರಲ್ಲಿ ಇಂತಹ ಸಂಖ್ಯೆಗಳು

ಎಷ್ಟು ಎಂದು ನಾನು ಕೇಳಿದ್ದೇನೆ. ಎಂಟು ಅವರು ಹೇಳಿದ್ದಾರೆ. ಸರ್ಕಾರಕ್ಕೆ ಬರಬೇಕಾದ ರಾಜಧನವನ್ನು ಇವತ್ತು ಅಲ್ಲಿರುವಂತಹ ಕೆಲವು ರಾಜಕೀಯ ಪುಡಾರಿಗಳು ಅದನ್ನು ಸರ್ಕಾರಕ್ಕೆ ತುಂಬಬೇಕಾದ ರಾಜಧನವನ್ನು ಅವರು ದುರ್ಬಳಕೆ ಮಾಡುತ್ತಿದ್ದಾರೆಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ: ಮಾನ್ಯ ಅಧ್ಯಕ್ಷರೆ, ಸುಮಾರು ಎಂಟು ಕೇಸ್‌ನಲ್ಲಿ ಇಲ್ಲೀಗಲ್ ಕ್ವಾರಿಗಳು ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾವು ಈಗಾಗಲೇ ಹೇಳಿದ್ದೇವೆ. ಅದರಲ್ಲಿ ಪೆನಾಲ್ಟಿ ಕೂಡ ಸುಮಾರು 20,000 ರೂಪಾಯಿ ಹಾಕಿದ್ದೇವೆ. ಮತ್ತು ವಿಶೇಷವಾಗಿ ಗ್ರಾನೈಟ್ ಕ್ವಾರೀಸ್ ಅಲ್ಲ ಅದು. ಅಂತಹ ಕಡೆ ಯಾರು ಪ್ರೊಫೆಷನಲ್ ಆಗಿ ಅವರು ಆ ಒಂದು ದಂಧೆ ಮೇಲೆ ಉಪ ಜೀವನ ಮಾಡುತ್ತಿದ್ದಾರೆ ಅಂತಹವರಿಗೆ ಅವರು ಅಪ್ಲಿಕೇಷನ್ ತೆಗೆದುಕೊಂಡು ರೆಗ್ಯುಲರೈಸ್ ಮಾಡುವ ಪದ್ದತಿ ಸರ್ಕಾರದಲ್ಲಿ ಇದೆ. ಕಾನೂನಿಲ್ಲಿ ಇದೆ, ವಿಶೇಷವಾಗಿ ಬೋವಿ ಸಮಾಜದವರು ಮತ್ತು ವಡ್ಡರ ಸಮಾಜದವರು. ಅವರ ಜೀವನ ಅದರ ಮೇಲೆ ನಿರ್ಬಂಧಿತವಾಗಿದ್ದರೆ ಅಂತಹವರ ಅಪ್ಲಿಕೇಷನ್ ತೆಗೆದುಕೊಂಡು ಅವರಿಗೆ ಮಾರ್ಗದರ್ಶನ ಮಾಡಿ ರೆಗ್ಯುಲರೈಸ್ ಮಾಡುವ ಪದ್ದತಿ ಇದೆ. ಆದರೆ ತಾವು ಹೇಳಿರತಕ್ಕಂತಹ ಈ ಎಂಟು ಕೇಸಸ್‌ನಲ್ಲಿ ಪುಡಾರಿಗಳು ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಈ ಕಡೆ ಹಣ ತುಂಬುತ್ತಿಲ್ಲ ಇನ್ನೊಂದು ಕಡೆ ಗಣಿಗಾರಿಕೆ ಮುಂದುವರೆಸುತ್ತಾರೆ ಎಂದು ಹೇಳಿದಿರಿ, ಆ ಪುಡಾರಿಗಳು ಯಾರು ಎಂದು ಹೆಸರು ಕೊಟ್ಟರೆ ನಾನು ವೆರಿಫೈ ಮಾಡುತ್ತೇನೆ. ಇಲ್ಲವೆಂದರೆ ಈ ಎಂಟು ಕೇಸಸ್‌ನಲ್ಲಿ ಯಾರು ಪುಡಾರಿಗಳು ಇದ್ದಾರೆ ವಿಶೇಷವಾಗಿ ಕಾನೂನು ತಮ್ಮ ಕೈಯಲ್ಲಿ ತೆಗೆದುಕೊಂಡು ಇಲ್ಲಿಗಲ್ಲಾಗಿ ಮಾಡತಕ್ಕಂತಹವರು ಇದ್ದರೆ ಅದನ್ನು ವೆರಿಫೈ ಮಾಡಿ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ಪ್ರಶ್ನೆ ಇಡೀ ರಾಜ್ಯದಲ್ಲಿ ಇದೆ. ವಿಶೇಷವಾಗಿ ನನ್ನ ತಾಲ್ಲೂಕಿನಲ್ಲಿ 10 ಎಕರೆ ಪ್ರದೇಶದಲ್ಲಿ ಇಲ್ಲೀಗಲ್ಲಾಗಿ ಕ್ವಾರಿ ಮಾಡುತ್ತಿದ್ದಾರೆ. ಅಲ್ಲಿ ಕಲ್ಲು ಹೊಡೆಯುವವರಿಗೆ ದುಡ್ಡು ಸಿಗುವುದಿಲ್ಲ. ಒಬ್ಬ ಮನುಷ್ಯ ದಿನಕ್ಕೆ 5ರಿಂದ 10,000 ರೂಪಾಯಿ ಕಲೆಕ್ಷನ್ ಮಾಡುತ್ತಾನೆ. ನನ್ನದೇ ಕ್ವಾರಿ ಎಂದು ಹೇಳುತ್ತಾನೆ. ನಿಮ್ಮ ಡೈರೆಕ್ಟರಿಗೆ ಬಹಳ ಹೇಳಿ ಆಯಿತು. ಅಲ್ಲಿರತಕ್ಕಂತಹ ಜಿಯಾಲಜೆಸ್ಟ್‌ಗೆ ಬಹಳ ಹೇಳಿ ಆಯಿತು. ಇವರು ಹೋಗುತ್ತಾರೆ 5,000 ರೂಪಾಯಿ ತಮ್ಮ ಜೇಬಿಗೆ ಹಾಕಿಕೊಂಡು 5,000 ರೂಪಾಯಿ ಪೆನಾಲ್ಟಿ ಎಂದು ಕಲೆಕ್ಟ್ ಮಾಡಿಕೊಂಡು ಮುಂದುವರೆಸಿ ಎಂದು ಹೇಳುತ್ತಾರೆ. ಮತ್ತೊಂದು ಸಾರಿ ನಾನು ವಿಧಾನ ಸಭೆಯಲ್ಲಿ ಪ್ರಸ್ತಾಪ ಮಾಡಿದರೆ

ಮತ್ತೊಂದು ಸಾರಿ ಹೋಗುತ್ತಾರೆ. ಇದು ಏತಕ್ಕಾಗಿ ಹೀಗೆ ನಡೆಯುತ್ತಿದೆ? ಯಾರು ಕಲ್ಲು ಹೊಡೆಯುತ್ತಾರೆ ಅವರಿಗೆ ಹಾಕಿ ಕೊಟ್ಟು ಬಿಡಿ. ಅಥವಾ ಲೀಸ್ ಮಾಡುವುದಕ್ಕೆ ಏನು ತೊಂದರೆ ನಿಮಗೆ? ಎಷ್ಟೊಂದು ಸರ್ಕಾರದ ಸಂಪತ್ತು ಯಾರ್ಯಾದೋ ದುರ್ವಿನಿಯೋಗ ಮಾಡಿ ಒಬ್ಬೊಬ್ಬರೇ ಶ್ರೀಮಂತರಾಗಿದ್ದಾರೆ. ಇದನ್ನು ನೋಡಿ ಕೂಡ ಕಣ್ಣು ಮುಚ್ಚಿ ಕೂತಿದ್ದಾರೆ. ನಿಮ್ಮ ಇಲಾಖೆ ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ.

ಅಧ್ಯಕ್ಷರು: ಹರಾಜು ಮಾಡಿದರೆ ಪಂಚಾಯಿತಿಗಳಿಗೆ ದುಡ್ಡು ಉಳಿಯುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ: ಮಾನ್ಯ ಅಧ್ಯಕ್ಷರೆ, ಎಲ್ಲೆಲ್ಲಿ ಅಪ್ಲಿಕೇಷನ್ ಕೊಟ್ಟಿದ್ದಾರೆ ಅಂತಹ ಕಡೆ ಈಗಾಗಲೇ ನಮ್ಮ ಈಶ್ವರಗೌಡರು ಹೇಳಿದ ಹಾಗೆ ಎಲ್ಲೆಲ್ಲಿ ಪರ್ಮಿಷನ್ ಕೊಡಬೇಕು ಅಂತಹ ಕೇಸಸ್ ಮೇಲೆ 155 ಕೇಸಸ್ ಮೇಲೆ ಕೊಟ್ಟಿದ್ದೇವೆ. ಕೇವಲ ಎಂಟು ಕೇಸಸ್ ಮೇಲೆ ಮಾತ್ರ ಇಲ್ಲೀಗಲ್ಲಾಗಿ ಮಾಡುತ್ತಿದ್ದಾರೆ ಎಂದು ಬಂದಿದೆ. ಅದರಲ್ಲಿ ಲೀಡರ್ಸ್ ಇದ್ದಾರೆ ಅಥವಾ ಪುಡಾರಿಗಳು ಇದ್ದಾರೆ, ಅವರು ಈ ರೀತಿಯಾಗಿ ಮಾಡುತ್ತಿದ್ದಾರೆ. ಕಾನೂನು ಕೈಯಲ್ಲಿ ತೆಗೆದುಕೊಂಡು ಮಾಡುತ್ತಿದ್ದಾರೆಂದು ಅಪಾದನೆ ಅವರದು ಇದೆ. ಅದರ ಬಗ್ಗೆ ನಾನು ಮಾಹಿತಿ ತರಿಸಿ ಅದರಲ್ಲಿ ಯ್ಯಾರಾದರೂ ಮುಖಂಡರು ಇದ್ದರೆ ಅಥವಾ ಇಲ್ಲೀಗಲ್ಲಾಗಿ ಅದನ್ನು ಮಾಡುತ್ತಿದ್ದರೆ ಅಂಥವರ ಬಗ್ಗೆ ಕ್ರಮ ಜರುಗಿಸುತ್ತೇವೆ.

ಆದರೆ ಬಡವರು ಕೆಲವು ಸಲ ತಮ್ಮ ಉಪ ಜೀವನಕ್ಕಾಗಿ ಮಾಡುತ್ತಿರುವಂಥದ್ದೂ ಕೂಡ ಇರುತ್ತದೆ. ಅವರಿಗೆ ನಾವು ಅವರು ಇಲ್ಲೀಗಲ್ ಆಗಿ ಮಾಡಿದರೂ ಎಂದು ಹೇಳಿ ಅಂಥ ಕುಟುಂಬದವರಿಗೆ ತಪ್ಪಿಸುವುದಕ್ಕೆ ಆಗುವುದಿಲ್ಲ. ದೊಡ್ಡ ದೊಡ್ಡ ಕ್ವಾರೀಸ್ ಮಾಡತಕ್ಕಂಥವರ ಬಗ್ಗೆ ಈಗಾಗಲೇ ಅರಗ ಜ್ಞಾನೇಂದ್ರರವರು ಹೇಳಿದರು, ಅವರ ಮತ ಕ್ಷೇತ್ರದಲ್ಲಿ ಒಂದು ಹತ್ತು ಎಕರೆಯಲ್ಲಿ ಒಬ್ಬರೇ ಮಾಡುತ್ತಿದ್ದಾರೆ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಅಂಥವರ ಹೆಸರೇನಾದರೂ ಇದ್ದರೆ ಅದನ್ನು ನಮಗೆ ಕೊಡಿ. ಆದರೆ ಇದು ಧಾರವಾಡಕ್ಕೆ ಸೀಮಿತವಾಗಿರತಕ್ಕಂಥ ಪ್ರಶ್ನೆ ಇದ್ದ ಕಾರಣ ಅದಕ್ಕೆ ಸಂಬಂಧಪಟ್ಟ ಮಾಹಿತಿ ಸದ್ಯಕ್ಕೆ ನನ್ನ ಬಳಿ ಇದೆ. ಅವರು ವಿಶೇಷವಾಗಿ ಏನಾದರೂ ಬೇರೆ ಪ್ರಶ್ನೆ ಕೇಳಿದ್ದರೆ ಖಂಡಿತವಾಗಿ ಆ ಮಾಹಿತಿಯನ್ನು ಅವರಿಗೆ ಒದಗಿಸಿ ಕೊಡುತ್ತೇವೆ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಇನ್ನೂ ಮುಗಿದಿಲ್ಲ. ನನ್ನ ಸ್ವಂತ ಕ್ಷೇತ್ರ ಧಾರವಾಡ ಜಿಲ್ಲೆಯಲ್ಲಿ ಕಲಘಟಗಿ. ನನ್ನ ಕ್ಷೇತ್ರದಲ್ಲಿ 71 ಲೀಸ್ ಹೋಲ್ಡರ್ ಇದ್ದಾರೆಂದು ಹೇಳುತ್ತಿದ್ದಾರೆ. ಕಡಿಮೆ ಎಂದರೂ 150 ಜನರು ಅಲ್ಲಿ ಕ್ವಾರಿಯನ್ನು ಮಾಡುತ್ತಿದ್ದಾರೆ. ನಾನು ತಮ್ಮ ಗಮನಕ್ಕೆ

ತರುವುದೇನೆಂದರೆ ಅಲ್ಲಿ ಒಂದು ದಿನಕ್ಕೆ 300 ರಿಂದ 400 ಲಾರಿಗಳು ಕ್ವಾರಿ ಮಾಡುವ ಸ್ಥಳಕ್ಕೆ ಬರುತ್ತಿದೆ. ಒಂದು ಟನ್‌ಗೆ 15 ರೂಪಾಯಿ ರಾಜಧನವನ್ನು ಸರ್ಕಾರ ನಿಗಧಿ ಮಾಡಿದೆ. 10 ಟನ್‌ನ್ನು ಒಂದು ಟ್ರಕ್ ಒಳಗೆ ತರುತ್ತಾರೆ. 10 ಟನ್ ಒಂದು ಟ್ರಕ್‌ಗೆ ಬಂದಾಗ 300 ಟ್ರಕ್‌ಗೆ ಎಷ್ಟಾಯಿತು ಎಂಬ ಬಗ್ಗೆ ತಾವೇ ವಿಚಾರ ಮಾಡಿನೋಡಿ. ಒಂದು ದಿನಕ್ಕೆ ಕಡಿಮೆ ಎಂದರೂ 300 ಟ್ರಕ್‌ಗೆ ಎಷ್ಟಾಯಿತು ಎಂಬ ಬಗ್ಗೆ ತಾವೇ ವಿಚಾರ ಮಾಡಸೋಣ. ಒಂದು ದಿನಕ್ಕೆ ಕಡಿಮೆ ಎಂದರೂ 300 ಟ್ರಕ್‌ಗಳು ಬರುತ್ತಿವೆ. ಇವರು ಏನು ಮಾಡುತ್ತಾರೆಂದರೆ, ಅಲ್ಲಿರುವಂಥ ಅಧಿಕಾರಿಗಳು ಅಲ್ಲಿರುವಂಥ ಕಂಟ್ರ್ಯಾಕ್ಟ್‌ರ್‌ಗಳು ಶಾಮೀಲಾಗುತ್ತಿದ್ದಾರೆ. ಈ ರೀತಿ ಶಾಮೀಲಾಗಿ ಒಂದು ವಾರಕ್ಕೆ ಏನು ಕಲ್ಲು ಹೋಗುತ್ತವೆ, ಒಂದು ತಿಂಗಳಿಗೆ 75 ರೂಪಾಯಿಯನ್ನು ಅಲ್ಲಿರುವಂಥ ಅಧಿಕಾರಿಗಳು ನಂಬರ್ 2ನಲ್ಲಿ ರೊಕ್ಕ ತೆಗೆದುಕೊಳ್ಳುತ್ತಿದ್ದಾರೆ. ಅಲ್ಲಿ ಒಂದು ನಾಲ್ಕು ಜನ ಕಂಟ್ರ್ಯಾಕ್ಟರ್‌ಗಳು ದೊಡ್ಡ ದೊಡ್ಡ ಮಿಶಿನ್ ಹಾಕಿಕೊಂಡಿದ್ದಾರೆ. ಏಳು ಲಕ್ಷ ಎಪ್ಪತ್ತು ಸಾವಿರ ರೂಪಾಯಿಗಳನ್ನು ಇವ್ನೊತ್ತು ಸರ್ಕಾರಕ್ಕೆ ಏನು ಕೊಟ್ಟಿದ್ದಾರೆ ಇಷ್ಟು ಮಾಲು ಒಬ್ಬರ ಕಡೆಯೇ ದಾಸ್ತಾನು ಇದೆ. ಇವ್ನೊತ್ತು ಅಧ್ಯಕ್ಷರೆ, ಒಬ್ಬೊಬ್ಬ ಕಂಟ್ರ್ಯಾಕ್ಟರ್ ಕಡೆ ಇಷ್ಟೆಲ್ಲಾ ಮಾಲು ಸರ್ಕಾರಕ್ಕೆ ಏನು ಒಂದು ವರ್ಷಕ್ಕೆ ತುಂಬಿದ್ದಾರೆ. ಇಷ್ಟುಮಾಲು ಒಬ್ಬರ ಕಡೆಯೇ ದಾಸ್ತಾನು ಇದೆ. ಇವ್ನೊತ್ತು ಅಧ್ಯಕ್ಷರೆ, ಅಂದರೆ ಅಧಿಕಾರಿಗಳೇ 75ರಂತೆ ನಂಬರ್ 2ನಲ್ಲಿ ದುಡ್ಡು ತೆಗೆದುಕೊಳ್ಳುತ್ತಿದ್ದಾರೆ ಅಧ್ಯಕ್ಷರೆ. ಅವರ ಮೇಲೆ ತಕ್ಷಣ ಕ್ರಮವನ್ನು ಮಾನ್ಯ ಸಚಿವರು ತೆಗೆದುಕೊಳ್ಳಬೇಕು. ಇದಕ್ಕೆ ಮಾನ್ಯ ಸಚಿವರು ಈಗ ಉತ್ತರ ಕೊಡಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ ಈಗ ನಮ್ಮಲ್ಲಿ ಎಷ್ಟು ಜನರು ಲೀಸ್ ತೆಗೆದುಕೊಂಡು ಅಲ್ಲಿ ಕ್ವಾರಿಯನ್ನು ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿಯನ್ನು ತಮಗೆ ಒದಗಿಸಿಕೊಟ್ಟಿದ್ದೇವೆ. ನೀವು ಬೇಕಾದರೆ ಹೆಸರನ್ನು ಓದಿ ಎಂದರೆ ಓದುತ್ತೇನೆ. ಒಟ್ಟು 81 ಜನರ ಹೆಸರು ಇಲ್ಲಿ ಇದೆ. ಇದರಲ್ಲಿ ಮುಚ್ಚಿಡುವ ಪ್ರಶ್ನೆಯೇ ಇಲ್ಲ. ಆದರೆ ಇದರಲ್ಲಿ ಇಲ್ಲದೇ ಇರುವವರು ಏನಾದರೂ ಕ್ವಾರಿಯನ್ನು ಮಾಡುತ್ತಿದ್ದರೆ ಅಂಥದ್ದರ ಬಗ್ಗೆ ವಿಶೇಷವಾದ ಮಾಹಿತಿ ಮಾನ್ಯ ಸದಸ್ಯರ ಹತ್ತಿರ ಇದ್ದರೆ ಖಂಡಿತವಾಗಿ ನಮಗೆ ಅದನ್ನು ಕೊಡಿ. ನಾವು ನೋಡೋಣ. ಆದರೆ ಒಂದು ತಕರಾರು ಕೂಡ ನಮ್ಮ ಮುಂದೆ ಬಂದಿದೆ. ಕೆಲವು ಕಡೆ ಕ್ವಾರಿ ಮಾಡತಕ್ಕಂಥವರು ಅಲ್ಲಿರತಕ್ಕಂಥ ಈ ಎಸ್‌ಸಿ : ಎಸ್‌ಟಿ ರೆಸಿಡೆನ್‌ಶಿಯಲ್ ಹಟ್‌ಮೆಂಟ್ಸ್ ಏನಿದೆ ಅದರ ಪಕ್ಕದಲ್ಲಿ ಗಣಿಗಾರಿಕೆಯನ್ನು ಮಾಡುತ್ತಿದ್ದರು ಎನ್ನುತಕ್ಕಂಥ ಮಾಹಿತಿಯೂ ಬಂದಿದೆ. ಅದನ್ನು ಅವರ ಲೀಸ್ ಕೂಡ ಜನವರಿ 2006ಕ್ಕೆ ಎಕ್ಸ್‌ಪೈರ್ ಆಗುತ್ತದೆ. ಆದರೆ ಅದನ್ನು ಇನ್ನೂ ಮುಂದುವರೆಸಬೇಕು ಎಂಬ ಬಗ್ಗೆ

ಈಗಾಗಲೇ ಪ್ರಯತ್ನಗಳೂ ಕೂಡ ನಡೆದಿದೆ ಎಂಬ ಬಗ್ಗೆ ಕೂಡ ನಮಗೆ ಕೇಳಿಬಂದಿದೆ. ಆದರೆ ಚಿಕ್ಕನಗೌಡ್ರಿಗೆ ನಾನು ಹೇಳತಕ್ಕಂಥ್ದು ಇಷ್ಟೆ. ಅವರ ಹತ್ತಿರ ಏನೇ ಬೇರೆ ಮಾಹಿತಿ ಇದ್ದರೂ ಅದನ್ನು ಫರ್ನಿಶ್ ಮಾಡಲಿ, ಅಲ್ಲಿ ಯಾರಾದರೂ ಕಾನೂನು ಬಾಹಿರವಾದಂಥ ಚಟುವಟಿಕೆಯನ್ನು ನಡೆಸಿದ್ದರೆ ಖಂಡಿತವಾಗಿ ಅವರ ಮೇಲೆ ಕೂಡ ಕ್ರಮವನ್ನು ಜರುಗಿಸುತ್ತೇವೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ. ಹೆಚ್.ಆರ್.ಗವಿಯಪ್ಪನವರೆ ಕೇಳಿ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರ ಗೌಡ: ಮಾನ್ಯ ಅಧ್ಯಕ್ಷರೇ, ಅಲ್ಲಿ ಏನು ನಡೆದಿದೆ...

ಅಧ್ಯಕ್ಷರು: ದಯವಮಾಡಿ ಕುಳಿತುಕೊಳ್ಳಿ. ನಿಮ್ಮ ಪ್ರಶ್ನೆ ಮುಗಿದಿದೆ. ಹೆಚ್.ಆರ್.ಗವಿಯಪ್ಪನವರೇ ನೀವು ಕೇಳಿ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ: ಅಧ್ಯಕ್ಷರೆ, ಅಲ್ಲಿ ಬೈಪಾಸ್ ನಡೆದಿದೆ. ನಾವು ಆ ಬಗ್ಗೆ ಹೇಳುವುದಕ್ಕೆ ನಮಗೆ ಎರಡು ನಿಮಿಷ ಅವಕಾಶ ಕೊಡಬೇಕು. ನಾವು ಹೊಸ ಸದಸ್ಯರು ನಾವು ತಮ್ಮನ್ನು ಕೇಳದೇ ಅವಕಾಶಕ್ಕಾಗಿ ಮತ್ತ್ಯಾರನ್ನು ಕೇಳಬೇಕು ಹೇಳಿ ಅಧ್ಯಕ್ಷರೆ.

ಅಧ್ಯಕ್ಷರು: ಗೌಡ್ರೆ, ಈಗ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಮಾಹಿತಿಗಳೇನಾದರೂ ಇದ್ದರೆ ಕೊಡಿ ಎಂದು ಹೇಳಿದ್ದಾರೆ. ನೋಡಿ ಇದು ಪ್ರಶ್ನೋತ್ತರ ಕಾಲ, ಈಗ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ತಾವು ದೊಡ್ಡವರು ತಾವು ದಯಮಾಡಿ ಸಹಕರಿಸಬೇಕು. ಮಾನ್ಯ ಯಡಿಯೂರಪ್ಪನವರೇ ತಾವು ದಯಮಾಡಿ ತಮ್ಮ ಸದಸ್ಯರಿಗೆ ಹೇಳಬೇಕು. ಪ್ರಶ್ನೋತ್ತರ ಇದು. ಒಂದು ಗಂಟೆಯೊಳಗೆ ಮುಗಿಸಬೇಕು. ಹೀಗಾದರೆ ಹೇಗೆ ಮುಗಿಸುವುದು ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಮೂಲ ಪ್ರಶ್ನೆಗೆ ಉತ್ತರ ಸಿಗದಿದ್ದರೆ ಅವರು ತಾನೇ ಏನ್ಮಾಡ್ತಾರೆ ಹೇಳಿ ಸಾರ್. ಅವರು ಕ್ಲಾರಿಫಿಕೇಶನ್ ಕೇಳಬೇಡವೆ?

ಅಧ್ಯಕ್ಷರು: ಕ್ಲಾರಿಫಿಕೇಶನ್‌ಗಳನ್ನು ಅವರು ಕೇಳುತ್ತಲೇ ಹೋಗುತ್ತಿದ್ದರೆ ನಾನು ಒಂದು ಗಂಟೆಯೊಳಗೆ ಪ್ರಶ್ನೋತ್ತರ ಮುಗಿಸುವುದು ಹೇಗೆ ಹೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಒಂದು ನಿಮಿಷ ಅವರಿಗೆ ಟೈಂ ಕೊಡಿ ಸಾರ್. ಚಿಕ್ಕನಗೌಡ್ರೆ ನೀವು ಕೇಳಿ.

ಅಧ್ಯಕ್ಷರು: ಏಕೆ ಹೀಗೆ ಮಾಡುತ್ತೀರೋ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೆ, ಅಲ್ಲಿ ಬೈಪಾಸ್ ನಡೆಯುತ್ತಿದೆ. ಆ ಬೈಪಾಸ್‌ಗೆ ಒಬ್ಬರೇ ಕಂಟ್ರ್ಯಾಕ್ಟರ್. ಆ ಒಬ್ಬರೇ ಕಂಟ್ರ್ಯಾಕ್ಟರ್ ಕಡಿಮೆ ಕಡಿಮೆ ಎಂದರೂ ಒಂದು ದಿನಕ್ಕೆ ನೂರು ಗಾಡಿ ಕಳುಹಿಸುತ್ತಿದ್ದಾರೆ. ಆ ಕಂಟ್ರ್ಯಾಕ್ಟರ್ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಲೋಕಲ್ ಸಚಿವರು ಇದ್ದಾರೆ. ಅವರಿಗೂ ಗೊತ್ತಿದೆ. ಹೊರಟ್ಟಿಯವರು ಇದ್ದಾರೆ ಮತ್ತೆ ಮೋರೆ ಸಾಹೇಬ್ರು ಇಲ್ಲಿ ಇದ್ದಾರೆ. ಅದಕ್ಕೆ ನಾನು ಹೇಳುವುದೇನೆಂದರೆ ಅಲ್ಲಿಗೆ ಒಬ್ಬ ಸರ್ಕಾರಿ ಅಧಿಕಾರಿಯನ್ನು ತಾವು ನೇಮಕ ಮಾಡಿ. ಯಾರು ಅಲ್ಲಿ ಕ್ಲಲು ತೆಗೆಯುತ್ತಿದ್ದಾರೆ ಎಂಬುದನ್ನು ತಾವು ವಿಚಾರ ಮಾಡಿ ಅಲ್ಲಿ ಒಂದು ಚೆಕ್‌ಪೋಸ್ಟ್‌ನ್ನು ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಅಧಾಯ ಬರುತ್ತದೆಯಾದ್ದರಿಂದ ಅದನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ದಯವಿಟ್ಟು ತಾವು ಇನ್ನೊಮ್ಮೆ ರಿಪೀಟ್ ಮಾಡಿದರೆ ಏಕೆಂದರೆ ಹೊರಟ್ಟಿಯವರಿಗೆ ಗೊತ್ತಿದೆ. ಅವರಿಗೆ ಗೊತ್ತಿದೆ ಇವರಿಗೆ ಗೊತ್ತಿದೆ ಎನ್ನುವುದಕ್ಕಿಂತಲೂ ನೇರವಾಗಿ..

ಅಧ್ಯಕ್ಷರು: ಚಿಕ್ಕನಗೌಡ್ರೆ ಅಲ್ಲಿ ಏನಾಗಬೇಕು ಎಂಬುದನ್ನು ಹೇಳಿ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ: ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಬರಬೇಕಾದಂಥ ಆದಾಯವನ್ನು ಅವರು ಸರಿಯಾಗಿ ತುಂಬುತ್ತಿಲ್ಲ. ಅದಕ್ಕಾಗಿ ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸಚಿವರಲ್ಲಿ ವಿನಂತಿ ಮಾಡುತ್ತೆನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, 155 ಜನರಿಗೆ ನಾವು ಲೀಸ್ ಕೊಟ್ಟಿದ್ದೇವೆ. ಅವರಿಂದ 75 ಲಕ್ಷ ರೂಪಾಯಿಗಳು ಬರುತ್ತವೆ ಎಂದು ಈಗಾಗಲೇ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಆ ಬಗ್ಗೆ ಅಂಕಿ ಅಂಶಗಳನ್ನು ಕೂಡ ಕೊಟ್ಟಿದ್ದೇವೆ. ಇದನ್ನು ಜನರು ಮಾತ್ರ ಇಲ್ಲಿಗಲ್ಲಾಗಿ ಕ್ವಾರಿಸ್ ಮಾಡತಕ್ಕಂಥದ್ದರ ಬಗ್ಗೆ ನಮ್ಮಲ್ಲಿ ಮಾಹಿತಿ ಇದೆ. ಅವರಿಗೂ ಕೂಡ ಪೆನಾಲ್ಟಿಯನ್ನುಹಾಕಿದ್ದೇವೆ. ಆದರೆ ಇವರನ್ನು ಬಿಟ್ಟು ಮತ್ತೆ ಯಾರಾದರೂ ಇಲ್ಲೀಗಲ್ ಕ್ವಾರೀಸ್ ಮಾಡುತ್ತಿದ್ದರೆ ಅವರ ಮೇಲೂ ಕೂಡ ಕ್ರಮ ಜರುಗಿಸುತ್ತೇವೆ. ಆದಕಾರಣ ಅಂಥವರು ಯಾರಾದರೂ ಇದ್ದರೆ ದಯವಿಟ್ಟು ನಮಗೆ ತಿಳಿಸಿ. ನಮ್ಮ ಕಣ್ಣನ್ನು ತಪ್ಪಿಸಿ ಅಥವಾ ನಮ್ಮ ವ್ಯಾಪ್ತಿಗೆ ಮಾಹಿತಿ ಬರೆದಿರುವಂಥದ್ದರ ಬಗ್ಗೆ ತಮ್ಮಲ್ಲಿ ಏನಾದರೂ ಮಾಹಿತಿಗಳು ಇದ್ದರೆ ಅದನ್ನು ನಮಗೆ ಕೊಡಿ. ಖಂಡಿತವಾಗಿ ಅಂಥವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ: ವಿವರ ಕೊಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೊಡಿ. ಆಮೇಲೆ ಇದರಲ್ಲಿ ವರಮಾನ ಸರ್ಕಾರಕ್ಕೆ ಸೋರಿಹೋಗತಕ್ಕಂಥದ್ದು ಏನಾದರೂ ಆಗಿದ್ದರೆ ಅದರ ಬಗ್ಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಮತ್ತೆ ಇದರಲ್ಲಿ ಇನ್ನೂ ಏನಾದರೂ ತಪ್ಪಿದ್ದರೆ ಅದನ್ನು ಸರಿಪಡಿಸತಕ್ಕಂಥದ್ದು ಅಥವಾ ಹೆಚ್ಚಿನ ಮಾಹಿತಿ ಏನಾದರೂ ಬೇಕಾದರೆ ಅದನ್ನೂ ಕೂಡ ಒದಗಿಸಿಕೊಡುತ್ತೇವೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 3512

ಸದಸ್ಯರ ಹೆಸರು : ಶ್ರೀ ಹೆಚ್.ಆರ್.ಗವಿಯಪ್ಪ(ಹೊಸಪೇಟೆ)

ಉತ್ತರಿಸುವ ಸಚಿವರು : ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

<table>
<tr><th>ಕ್ರ.ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ.</td><td>ತುಂಗಭದ್ರಾ ಅಣೆಕಟ್ಟು ನಿರ್ಮಾಣಗೊಂಡ ನಂತರ ಕರ್ನಾಟಕ ಹಾಗೂ ಆಂಧ್ರ ರಾಜ್ಯಗಳಿಗೆ ಎಷ್ಟೆಷ್ಟು ನೀರು ಸರಬರಾಜು ಮಾಡಬೇಕೆಂದು ಒಪ್ಪಂದವಾಗಿರುವುದು;
(ವಿವರವಾದ ಮಾಹಿತಿಯನ್ನು ಒದಗಿಸುವುದು)?</td><td>ಬಚಾವತ್ ಆಯೋಗದ ಐತೀರ್ಪಿನ ಪ್ರಕಾರ ಕರ್ನಾಟಕ ಮತ್ತು ಆಂಧ್ರ ಪ್ರದೇಶ ರಾಜ್ಯಗಳಿಗೆ ಹಂಚಿಕೆಯಾಗಿ ರುವ ನೀರಿನ ಪ್ರಮಾಣದ ವಿವರಗಳು ಕೆಳಕಂಡಂತಿದೆ:-
(ಟಿ.ಎಂ.ಸಿ.ಗಳಲ್ಲಿ)
<table>
<tr><th>ರಾಜ್ಯ</th><th>ಒಟ್ಟು ಹಂಚಿಕೆ</th><th>ಆವಿಯಿಂದ ನಷ್ಟವಾಗುವ ನೀರಿನ ಪ್ರಮಾಣ</th><th>ನಿವ್ವಳ ಹಂಚಿಕೆ</th></tr>
<tr><td>ಕರ್ನಾಟಕ</td><td>151.49</td><td>12.50</td><td>138.99</td></tr>
<tr><td>ಆಂಧ್ರಪ್ರದೇಶ</td><td>78.51</td><td>5.50</td><td>73.07</td></tr>
<tr><td>ಒಟ್ಟು</td><td>230.00</td><td>18.00</td><td>212.00</td></tr>
</table>
</td></tr>
</table>